ಮಾತ್ರವಲ್ಲ, ಹೊರಗೆ ಎಲ್ಲಿ ತೊಂದರೆ ಮಾಡಿಕೊಂಡರೂ ವೈದ್ಯ ವೃತ್ತಿಗೆ ಕಂಟಕ ಬರುತ್ತಿತ್ತು. ವೈದ್ಯ ವೃತ್ತಿಗೆ ಇಂಗ್ಲೆಂಡಿನಲ್ಲಿ ಬಹಳ ಕಟ್ಟುನಿಟ್ಟಾದ ನಿಯಮಗಳಿದ್ದವು.

ಬೆಣ್ಣೆಯಂತಹ ಬಣ್ಣದ ಚರ್ಮ, ಮುದ್ದಾದ ಮುಖಗಳು. ಅರ್ಧ ಎದೆ, ಮುಕ್ಕಾಲು ಕಾಲುಗಳು ಅವರದೇ ಅಲ್ಲವೇನೋ ಎನ್ನುವಂತೆ ಪ್ರದರ್ಶನ ಮಾಡುತ್ತ ಅರಗಿನ ದೇವತೆಗಳಂತಹ ಸಹೋದ್ಯೋಗಿ ಹೆಣ್ಣುಗಳು ಮೈ ತಾಗಿಸಿಕೊಂಡೇ ಓಡಾಡುತ್ತಿದ್ದರೂ ಅವರನ್ನು ನೋಡುವುದು ಕೂಡ ಪಾಪ ಎನ್ನುವಂತೆ ಕಣ್ಣಿಗೆ ನಿಯಂತ್ರಣ ಇಟ್ಟುಕೊಂಡಿರಬೇಕು. ಅವರು ಅಷ್ಟುದ್ದ ದೂರಕ್ಕೆ ಹೋದ ನಂತರ ಕಂಡೂ ಕಾಣದಂತೆ ಒಮ್ಮೆ ಕದ್ದು ನೋಡುವುದು ಮಾತ್ರವೇ ಸಾಧ್ಯವಿದ್ದುದು. ಅಷ್ಟೇ ಏಕೆ, ತಲೆಯ ಮೇಲೆ ಅಪ್ಪನ ಸಾಲದ ಹೊರೆ, ಮನೆಯವರ ಅಭಿಲಾಷೆಗಳ ಭಾರ, ಚೆನ್ನಾಗಿ ತರಬೇತಿ ಪಡೆದು ಮೇಲೆ ಬರಬೇಕೆಂಬ ಹಂಬಲ, ಎಲ್ಲಿ ಯಾವುದಾದರೂ ತಪ್ಪಿನಿಂದ ಆಕಸ್ಮಿಕವಾಗಿ ಯಾವುದಾದರೂ ರೋಗಿ ಗೊಟಕ್ ಅಂದುಬಿಟ್ಟರೆ ಎನ್ನುವ ಭಯವನ್ನು ಹೊತ್ತ ನಮ್ಮ ಹುಡುಗರಿಗೆ ತರಬೇತಿ ಪಡೆಯುತ್ತಿರುವ ವರ್ಷಗಳಲ್ಲಿ ಸೆಕ್ಸ್ ನೆನಪಾಗುವುದು ಕೂಡ ಕಷ್ಟವೇ.

ರಾತ್ರಿ ಪಾಳಿಯಲ್ಲಿರುವಾಗ ಆಸ್ಪತ್ರೆಯ ದೂರವಾಣಿಯನ್ನು ಸೊಂಟದ ಬಳಿಯೇ ಕಟ್ಟಿಕೊಂಡಿರಬೇಕು. ಯಾವಾಗ ಯಾರು, "ಈ ರೋಗಿಯನ್ನು ನೋಡು ಬಾ'' ಅಂತ ಕರೆಯುತ್ತಾರೋ ಎಂದು ಕಾಯುವಾಗ ಮೈಮೇಲೆ ಬಾಂಬು ಹೊತ್ತಂತಹ ಅನುಭವ. ಯಾಕೆಂದರೆ, ಬರೀ ರೋಗಿಯನ್ನು ನೋಡುವುದಷ್ಟೇ ಅಲ್ಲ, ಸರ್ಜನ್ ಆಗಬೇಕೆಂದು ಕಲಿಯುತ್ತಿರುವ ಕಾರಣ ಅವರನ್ನು ನೋಡುವುದು, ಸಮಸ್ಯೆಯ ತುರ್ತನ್ನು ಗಮನಿಸುವುದು, ಏನಾದರೂ ಸಂದೇಹಗಳಿದ್ದರೆ ಸೀನಿಯರ್‌ಗಳಿಗೆ ಫೋನ್ ಕರೆ ಮಾಡುವುದು, ಬೇಕೆಂದಲ್ಲಿ ಆಪರೇಷನ್ ಥಿಯೇಟರ್ ಬುಕ್ ಮಾಡುವುದು, ವಾರ್ಡಿನಲ್ಲಿ ಹಾಸಿಗೆ ಇದೆಯೇ ಅಂತ ಹುಡುಕುವುದು, ಅರಿವಳಿಕೆ ತಜ್ಞರನ್ನು ಕರೆಯುವುದು, ರಕ್ತವನ್ನು ಪರೀಕ್ಷೆಗೆ ಕಳಿಸುವುದು, ರೋಗಿಗಳ ರಕ್ತಕ್ಕೆ ಹೊಂದುವ ರಕ್ತವನ್ನು ಹೊಂಚುವುದು, ರೋಗಿಗೂ ಮತ್ತು ಅವರ ಸಂಬಂಧಿಗಳಿಗೆ ಎಲ್ಲವನ್ನೂ ವಿವರಿಸುವುದು, ಅದೇ ರೋಗಿಗೆ ಇತರ ತೊಂದರೆಗಳಿದ್ದರೆ ಆಯಾ ವಿಭಾಗಕ್ಕೆ ಕರೆ ಮಾಡುವುದು, ಇವನ್ನೆಲ್ಲ ಮತ್ತೆ ಸೀನಿಯರ್‌ಗಳಿಗೆ ತಿಳಿಸುವುದು ಇನ್ನೂ ಹಲವು ಹತ್ತು ಕೆಲಸಗಳನ್ನು ಮಾಡಬೇಕಾಗುತ್ತಿತ್ತು.

ಅಷ್ಟೇ ಆಗಿದಿದ್ದರೆ ಪರವಾಗಿರಲಿಲ್ಲ. ಆದರೆ, ಒಂದು ರಾತ್ರಿಯಲ್ಲಿ ಒಂದೇ ಒಂದು ಕೇಸೇನು? ಒಂದು ಕೆಲಸ ಮಾಡವಾಗಲೇ ಇನ್ನೊಂದು ಕರೆ ಬರುತ್ತಿತ್ತು. ಅದನ್ನು ನೋಡುವ ಮಧ್ಯದಲ್ಲೇ ಮತ್ತೊಂದು ಕರೆ. ಇವರ ಕೆಲಸ ಮಾಡುವಾಗ ಅವರು ಲೇಟಾಯ್ತು ಅಂತ ದೂರು ಹೇಳುತ್ತಿದ್ದರು. ಇವನ್ನೆಲ್ಲ ತಾಳಿ ಹಾಕಲು ಸಮಯವನ್ನೂ ಕೊಡುತ್ತಿರಲಿಲ್ಲ. ಸಮಯದ ಒತ್ತಡ ಇಡೀ ವೃತ್ತಿಯನ್ನು ದುಸ್ಸಾಧ್ಯ ಮಾಡಿಬಿಡುತ್ತಿತ್ತು.

ಇವೆಲ್ಲದರ ನಡುವೆ ಸೀನಿಯರ್‌ಗಳು ಬಂದು, "ಹೌ ಎಬೌಟ್ ದಿಸ್... ಅಂಡ್ ದಟ್'' ಅಂತ ಪ್ರಾಣ ತೆಗೆದುಬಿಡುತ್ತಿದ್ದರು. ಇಡೀ ರಾತ್ರಿ ನಿದ್ದೆಗೆಟ್ಟರೂ ಜೂನಿಯರ್ ವೈದ್ಯರೇ ಕೆಟ್ಟ ಹೆಸರನ್ನು ಪಡೆಯಬೇಕಿತ್ತು. ಇನ್ನು ಸರ್ಜರಿ ಮಾಡುವ ಮತ್ತು ಕಲಿಯುವ ಅವಕಾಶ ಸಿಗುತ್ತಿದ್ದುದೇ ಅಪರೂಪ. ಇಂತಹ ದಿನಗಳಲ್ಲಿ ಅವತ್ತಿನ ರಾತ್ರಿಯ ನಿದ್ರೆಯಿರಲಿ, ಮುಂದಿನ ಮೂರು ದಿನಗಳ ಮನಃಶಾಂತಿಯೂ ಕದಡಿಹೋಗುತ್ತಿತ್ತು. ನರಕ ಸದೃಶ ಕೆಲಸದ ದಿನಗಳು ದುಃಸ್ವಪ್ನಗಳಾಗಿ ಕಾಡುತ್ತಿದ್ದವು. ನಡು ನಡುವೆ ಆಗೀಗ ಉತ್ತಮ ದಿನಗಳೂ ಇರುತ್ತಿದ್ದವು. ಆದರೆ, ಸೀನಿಯರ್ ಪಟ್ಟ ಸಿಗುವವರೆಗೆ ಅವುಡುಗಚ್ಚಿ ಕೆಲಸ ಮಾಡಿಕೊಂಡು ಹೋಗಬೇಕಿತ್ತು ಅಷ್ಟೆ.

ಬಹುತೇಕರು ಉತ್ತಮರೇ. ಆದರೂ ಕೆಲವು ನರ್ಸುಗಳು ವಿದೇಶದಿಂದ ಬರುವ ಕಿರಿಯ ವೈದ್ಯರನ್ನು ಕಾಲ ಕಸದಂತೆ ನೋಡುತ್ತಿದ್ದರು. ರೇಸಿಸಂ ಜೊತೆ ಹಲವು ಚೇಷ್ಟೆಗಳು ಬೇರೆ. ಸ್ವಲ್ಪ ಕಕ್ಕಾಬಿಕ್ಕಿಯಾದರೆ